ಮಾಜಿ ಸೈನಿಕರಿಗೆ ಉಳಿಕೆ ಭೂಮಿಗೆ ಆಗ್ರಹ

ರತ್ನಪುರಿ ಗ್ರಾಮದ ಮಾಜಿ ಸೈನಿಕರ ಸಂಘದ ಮುಂದೆ ಕುಟುಂಬಸ್ಥರ ಪ್ರತಿಭಟನೆ

ಹುಣಸೂರು,ಜ.೧೨– ಮಾಜಿ ಸೈನಿಕರ ಬಗ್ಗೆ ತಾಲ್ಲೂಕು ಆಡಳಿತ ಅಸಡ್ಡೆ ತೋರುತ್ತಿದ್ದು, ೨ನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಮಾಜಿ ಸೈನಿಕರ ಕುಟುಂಬಕ್ಕೆ ಉಳಿಕೆ ಭೂಮಿ ನೀಡದೆ ವಂಚಿಸುತ್ತಿದೆ ಎಂದು ಸತ್ಯ ಎಂಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ರತ್ನಪುರಿ ಗ್ರಾಮದಲ್ಲಿರುವ ಮಾಜಿ ಸೈನಿಕರ ಸಂಘದ ಮುಂದೆ ನಡೆದ ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಸತ್ಯನಾರಾಯಣ ರಾವ್ ಖರಾಡೆ ಮಾತನಾಡಿ, ಮಾಜಿ ಸೈನಿಕರಿಗೆ ಮೀಸಲಿಟ್ಟ ಉಳಿಕೆ ಭೂಮಿಯನ್ನು ಸೈನಿಕರ ಕುಟುಂಬಕ್ಕೆ ತಾಲ್ಲೂಕು ಆಡಳಿತ ಮಂಜೂರು ಮಾಡಿಲ್ಲ. ಹೀಗಾಗಿ ಆ ಭೂಮಿಯನ್ನು ಅನ್ಯ ವ್ಯಕ್ತಿಗಳು ಅನುಭೋಗಿಸುತ್ತಿದ್ದಾರೆ. ತಾಲ್ಲೂಕು ಆಡಳಿತ ಅದು ಗೊತ್ತಿದ್ದೂ ಗೊತ್ತಿಲ್ಲದಂತೆ ವರ್ತಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸತ್ಯ ಎಂ.ಎ.ಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿ, ಕೇಂದ್ರ ಸರ್ಕಾರ ೧೯೫೨ನೇ ಇಸವಿಯಲ್ಲಿ ೨ನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ ೩೫೦ ಸೈನಿಕ ಕುಟುಂಬಗಳಿಗೆ ೫ ಸಾವಿರ ಎಕರೆ ಭೂಮಿಯನ್ನು ಮೈಸೂರು ರಾಜ್ಯದೊಂದಿಗೆ ಒಡಂಬಡಿಕೆ ಮಾಡಿಕೊಂಡು ಖರೀದಿ ಮಾಡಿತ್ತು. ಪ್ರತಿ ಕುಟುಂಬಕ್ಕೆ ೧೦ ಎಕರೆಯಂತೆ ಮತ್ತು ೨ ಕಾಲೋನಿಗಳಾದ ರತ್ನಪುರಿ ೧ ಮತ್ತು ರತ್ನಪುರಿ ೨ (ಚೌಡಿಕಟ್ಟೆ) ನಿರ್ಮಿಸಿ ಪ್ರತಿ ಕುಟುಂಬಕ್ಕೆ ೮ ಎಕರೆಯಂತೆ ೨೮೪ ಕುಟುಂಬಗಳಿಗೆ ಹಂಚಲಾಯಿತು. ಉಳಿಕೆ ಭೂಮಿ ಮಾಜಿ ಸೈನಿಕರಿಗೆ ಮಂಜೂರು ಮಾಡದೆ ಬೇನಾಮಿ ವ್ಯಕ್ತಿಗಳ ಪಾಲಾಗುತ್ತಿದೆ. ಇದು ತಾಲ್ಲೂಕು ಆಡಳಿತದ ಗಮನದಲ್ಲಿದ್ದರೂ ಗೊತ್ತಿಲ್ಲದಂತೆ ವರ್ತಿಸುತ್ತಿದ್ದಾರೆ. ಈ ಬಗ್ಗೆ ೯–೧–೨೦೧೬ರಂದು ಉಪವಿಭಾಗಾಧಿಕಾರಿ ಕಚೇರಿ ಮುಂದೆ ಸೈನಿಕ ಕುಟುಂಬ ಮತ್ತು ನಮ್ಮ ಸಂಸ್ಥೆ ಉಳಿಕೆ ಭೂಮಿ ನೀಡಲು ಸರ್ಕಾರಕ್ಕೆ ಒತ್ತಾಯಿಸಿದ್ದರೂ ಪ್ರಯೋಜನವಾಗಿರುವುದಿಲ್ಲ. ಶಾಸಕರು, ಸಂಸದರು ಈ ವಿಚಾರವಾಗಿ ಚಕಾರವೆತ್ತದೆ ಮೌನ ವಹಿಸಿರುವುದು ಸೈನಿಕರಿಗೆ ಮಾಡಿರುವ ದ್ರೋಹವಾಗಿದೆ. ಮುಂದಿನ ಹೋರಾಟವನ್ನು ಜಿಲ್ಲಾಧಿಕಾರಿ ಕಚೇರಿ ಮುಂದೆ ಮಾಡಬೇಕೆಂದು ಕರೆ ನೀಡಿದರು.

ಕಾರ್ಯದರ್ಶಿ ಜೋಸೆಫ್, ಗೌರವಾಧ್ಯಕ್ಷ ಬಾಲಸುಬ್ರಹ್ಮಣ್ಯಂ, ಖಜಾಂಚಿ ಸತೀಶ್ ಹಾಗೂ ಸೈನಿಕ ಕುಟುಂಬದವರು ಭಾಗವಹಿಸಿದ್ದರು.

೨ನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಮಾಜಿ ಸೈನಿಕರ ಕುಟುಂಬಕ್ಕೆ ಉಳಿಕೆ ಭೂಮಿ ನೀಡಬೇಕೆಂದು ಒತ್ತಾಯಿಸಿ ಹುಣಸೂರು ತಾಲ್ಲೂಕು ರತ್ನಪುರಿ ಗ್ರಾಮದಲ್ಲಿ ಮಾಜಿ ಸೈನಿಕರು ಕುಟುಂಬ ಸಮೇತ ಪ್ರತಿಭಟನೆ ನಡೆಸಿದರು. ಸಂಘದ ಅಧ್ಯಕ್ಷ ಸತ್ಯನಾರಾಯಣರಾವ್ ಖರಾಡೆ, ಸತ್ಯ ಎಂ.ಎ.ಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮೊದಲಾದವರು ಭಾಗವಹಿಸಿದ್ದರು

> ಮಾಜಿ ಸೈನಿಕರ ಕುಟುಂಬಗಳು ಸಂಕಷ್ಟದಲ್ಲಿವೆ. ಒಂದು ಮನೆಯಲ್ಲಿ ೮–೧೦ ಮಂದಿ ಇದ್ದಾರೆ. ಅವರೆಲ್ಲ ಇದೇ ಭೂಮಿಯನ್ನು ನಂಬಿಕೊಂಡು ಬದುಕುವ ಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಉಳಿಕೆ ಭೂಮಿಯನ್ನು ಮಂಜೂರು ಮಾಡಬೇಕು.
>
> **–ಡಿ.ಕೆ.ಸೋಮಣ್ಣ,** ಸಂಘದ ಉಪಾಧ್ಯಕ್ಷ.

ಬ್ಯಾಂಕುಗಳಲ್ಲಿ ಗ್ರಾಹಕರಿಗೆ ಅಗೌರವ: ಆರೋಪ

ತಿ.ನರಸೀಪುರ,ಜ.೧೨– ಪಟ್ಟಣದ ಕೆಲವು ಬ್ಯಾಂಕುಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಸಡ್ಡೆಯಿಂದ ವರ್ತಿಸುವ ಮೂಲಕ ಗ್ರಾಹಕರಿಗೆ ಅಗೌರವ ತೋರುತ್ತಿದ್ದಾರೆ ಎಂದು ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಹಾಗೂ ಮಾಜಿ ಉಪಾಧ್ಯಕ್ಷ ತೋಟದಪ್ಪ ಬಸವರಾಜು ದೂರಿದ್ದಾರೆ.

ಪಟ್ಟಣದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ೧೦ ರೂ. ಮುಖಬೆಲೆ ನಾಣ್ಯಗಳನ್ನು ಸ್ವೀಕರಿಸುತ್ತಿಲ್ಲ. ಅದರಲ್ಲೂ ಮಹೀಂದ್ರಾ ಕೋಟಕ್ ಬ್ಯಾಂಕ್‌ನಲ್ಲಿ ೧೦ ರೂ. ನಾಣ್ಯವನ್ನು ಮುಟ್ಟುವುದೇ ಇಲ್ಲ ಅಂತಾರೆ. ಹರಿದ ನೋಟುಗಳನ್ನು ತೆಗೆದುಕೊಳ್ಳದೆ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಗಳನ್ನು ಗಾಳಿಗೆ ತೂರಿದ್ದಾರೆ ಎಂದು ಆರೋಪಿಸಿದರು.

ಇತ್ತೀಚೆಗಷ್ಟೆ ಎಸ್‌ಬಿಐನಲ್ಲಿ ಎಸ್‌ಬಿಎಂಅನ್ನು ವಿಲೀನಗೊಳಿಸಿದ ನಂತರ ಎರಡೂ ಕಡೆ ಇದ್ದ ಬ್ಯಾಂಕ್ ಒಂದೇ ಕಟ್ಟಡದಲ್ಲಿ ವ್ಯವಹರಿಸುತ್ತಿವೆ. ಇದರಿಂದ ಎರಡೂ ಬ್ಯಾಂಕುಗಳ ಗ್ರಾಹಕರು ಈಗ ದಿನವಿಡೀ ಎಸ್‌ಬಿಐ ಮುಂದೆ ನಿಲ್ಲಬೇಕಾದ ದುಸ್ಥಿತಿಯಿದೆ. ಉಳಿತಾಯ ಖಾತೆ ತೆರೆಯಲು ಅಲೆದಾಡಬೇಕಾಗಿದ್ದು, ಗ್ರಾಹಕರ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಿರಿಯ ಅಧಿಕಾರಿಗಳು ಸಮಸ್ಯೆ ಗಂಭೀರ ಸ್ವರೂಪಕ್ಕೆ ತಿರುಗುವ ಮನ್ನ ಪರಿಸ್ಥಿತಿಯಲ್ಲಿ ಸುಧಾರಣೆ ತರಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬ್ಯಾಂಕ್‌ಗಳ ಮುಂದೆ ಪ್ರತಿಭಟನೆ ಅನಿವಾರ್ಯವಾಗುತ್ತದೆ ಎಂದು ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ.

ದೂರದಲ್ಲಿ ಅಂಬೇಡ್ಕರ್ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ದೂರ (ಮೈಸೂರು ತಾ.),ಜ.೧೨– ಶ್ರೀ ದುಗ್ಗಲಮ್ಮನ ಜಾತ್ರೆ ಪ್ರಯುಕ್ತ ಸಾಮ್ರಾಟ್ ಅಶೋಕ್ ಯೂತ್ಸ್, ರಾ.ಸು.ಡೆವಲಪರ್ಸ್ ಸಂಯುಕ್ತಾಶ್ರಯದಲ್ಲಿ ದೂರ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಕಪ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ರಾ.ಸು.ಡೆವಲಪರ್ಸ್ ವ್ಯವಸ್ಥಾಪಕ ಎಸ್.ಪುಟ್ಟಸ್ವಾಮಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ದೂರ ಗ್ರಾಪಂ ಅಧ್ಯಕ್ಷ ನಂಜುಂಡಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಆರ್.ವೆಂಕಟಸ್ವಾಮಿ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಡಿ.ಬಿ.ನಾಗರಾಜ್, ಎಪಿಎಂಸಿ ಸದಸ್ಯ ಎಂ.ನಾಗರಾಜ್, ಆರಾಧನಾ ಸಮಿತಿ ಸದಸ್ಯ ಪುಟ್ಟಸ್ವಾಮಿ, ಗ್ರಾಪಂ ಸದಸ್ಯರಾದ ಎಂ.ಕುಮಾರ್, ಮಂಜು, ನಂದೀಶ್, ಭಾಗ್ಯ, ಚನ್ನಮ್ಮ, ಕುಬೇರ, ಸರ್ಕಾರಿ ಶಾಲೆ ದೈಹಿಕ ಶಿಕ್ಷಕ ಭಕ್ತವತ್ಸಲ, ರಾಮಮೂರ್ತಿ, ಚಂದ್ರು, ಶ್ರೀಹರಿ, ಶಿವು, ಉಮೇಶ್ ಇತರರು ಹಾಜರಿದ್ದರು. ಜ.೧೬ರವರೆಗೆ ಪಂದ್ಯಾವಳಿ ನಡೆಯಲಿದ್ದು, ಒಟ್ಟು ೩೫ ತಂಡಗಳು ಪಾಲ್ಗೊಳ್ಳಲಿವೆ.

ಸ್ಕೂಟರ್–ಬೈಕ್ ಡಿಕ್ಕಿ: ಸವಾರರಿಗೆ ಗಾಯ

ಬೈಲಕುಪ್ಪೆ,ಜ.೧೨– ಸ್ಕೂಟರ್ ಮತ್ತು ಬೈಕ್ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಸವಾರರಿಬ್ಬರಿಗೆ ಪೆಟ್ಟಾಗಿರುವ ಘಟನೆ ಇಲ್ಲಿನ ಬಿ.ಎಂ. ರಸ್ತೆಯ ಪೆಟ್ರೋಲ್ ಬಂಕ್ ಸಮೀಪ ನಡೆದಿದೆ.

ಹುಣಸೂರು ತಾಲ್ಲೂಕು ಹಿರೆಕ್ಯಾತನಹಳ್ಳಿ ಗ್ರಾಮದ ವಿಜೇಂದ್ರ ಅವರ ಮಗ ವೆಂಕಟೇಶ(೨೩) ತೀವ್ರವಾಗಿ ಗಾಯಗೊಂಡಿದ್ದರೆ, ಸ್ಥಳೀಯರಾದ ಮತ್ತೊಬ್ಬ ಸವಾರ ತಮ್ಮಯ್ಯ(೫೮) ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ವೆಂಕಟೇಶ ಅವರು ಹೋಂಡ ಡಿಯೋ ಸ್ಕೂಟರ್‌ಗೆ ಪೆಟ್ರೋಲ್ ಹಾಕಿಸಿಕೊಂಡು ಬಿ.ಎಂ.ರಸ್ತೆಗೆ ಬರುವ ವೇಳೆ ಎದುರಿಗೆ ಬಂದ ಸ್ಪ್ಲೆಂಡರ್ ಬೈಕ್ ಮುಖಾಮುಖಿ ಡಿಕ್ಕಿ ಹೊಡೆದು ಈ ಘಟನೆ ಸಂಭವಿಸಿದೆ.

ತೀವ್ರವಾಗಿ ಪೆಟ್ಟಾಗಿರುವ ವೆಂಕಟೇಶ್ ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ರವಾನಿಸಲಾಗಿದೆ. ತಮ್ಮಯ್ಯ ಅವರನ್ನು ಕುಶಾಲನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಬೈಲಕುಪ್ಪೆ ಠಾಣಾಧಿಕಾರಿ ಪಿ.ಲೋಕೇಶ್ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಹುಣಸೂರು ನಗರಸಭೆಗೆ ಧನಲಕ್ಷ್ಮಮ್ಮ ಪ್ರಭಾರ ಅಧ್ಯಕ್ಷೆ

ಹುಣಸೂರು,ಜ.೧೨– ನಗರಸಭೆ ಪ್ರಭಾರ ಅಧ್ಯಕ್ಷರಾಗಿ ಧನಲಕ್ಷ್ಮಮ್ಮ ಶಿವರಾಜ್ ಶುಕ್ರವಾರ ಅಧಿಕಾರ ವಹಿಸಿಕೊಂಡರು.

ಅಧ್ಯಕ್ಷ ಕೆ.ಲಕ್ಷ್ಮಣ್ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಅಂಗೀಕಾರವಾಗಿದ್ದು, ನಗರಸಭಾಧ್ಯಕ್ಷರ ಸ್ಥಾನ ತೆರವಾಗಿದೆ. ಹೀಗಾಗಿ ಮುಂದೆ ಚುನಾವಣೆ ನಡೆದು ನೂತನ ಅಧ್ಯಕ್ಷರ ಆಯ್ಕೆಯಾಗುವವರೆಗೆ ಉಪಾಧ್ಯಕ್ಷರಾಗಿದ್ದ ಧನಲಕ್ಷ್ಮಮ್ಮ ಅವರನ್ನು ಪ್ರಭಾರ ಅಧ್ಯಕ್ಷರನ್ನಾಗಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಪೌರಾಯುಕ್ತ ಶಿವಪ್ಪನಾಯಕ ತಿಳಿಸಿದರು.

ಸದಸ್ಯರಾದ ಹಜರತ್ ಜಾನ್, ಶಿವರಾಜ್, ಸತೀಶ್, ನಸ್ರುಲ್ಲಾ, ಸುನಿತಾ ಜಯರಾಮ್, ಮಹದೇವ್, ರವಿಕುಮಾರ್, ಶರವಣ, ಶಿವಕುಮಾರ್, ಗುಪ್ತ, ಜೋಗಿ ಶ್ರೀನಿವಾಸ್, ಚಂದ್ರಶೇಖರ್, ನಂಜಪ್ಪ ಹಾಗೂ ಇತರರು ಹಾಜರಿದ್ದರು.

ನೌಕರರ ಸಂಘ ಸಾಮಾಜಿಕ ಕಾರ್ಯಗಳತ್ತಲೂ ಗಮನ ಹರಿಸಲಿ

ಸಂಘದ ದಿನದರ್ಶಿಕೆ ಮತ್ತು ದಿನಚರಿ ಪುಸ್ತಕಗಳನ್ನು ಬಿಡುಗಡೆ ಮಾಡಿ ಶಾಸಕ ಕೆ.ವೆಂಕಟೇಶ್ ಸಲಹೆ

ಪಿರಿಯಾಪಟ್ಟಣ,ಜ.೧೨– ಸರ್ಕಾರಿ ನೌಕರರ ಸಂಘವು ಸಂಘಟನೆಯ ಜೊತೆಗೆ ಸಾಮಾಜಿಕ ಕಾರ್ಯಗಳಿಗೂ ಸಂಘದ ಅಲ್ಪ ಲಾಭಾಂಶವನ್ನು ವಿನಿಯೋಗಿಸಬೇಕೆಂದು ಶಾಸಕ ಕೆ.ವೆಂಕಟೇಶ್ ಸಲಹೆ ನೀಡಿದರು.

ಅವರು ಪಟ್ಟಣದ ಶಾಸಕರ ಕಚೇರಿಯಲ್ಲಿ ಸಂಘದ ತಾಲ್ಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿನದರ್ಶಿಕೆ ಮತ್ತು ದಿನಚರಿ ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ರಾಜ್ಯ ಸರ್ಕಾರ ಸರ್ಕಾರಿ ನೌಕರರ ಬಹುತೇಕ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲಿದ್ದು, ನೌಕರರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಸರ್ಕಾರಿ ನೌಕರರ ಸಂಘದ ಪಿರಿಯಾಪಟ್ಟಣ ಶಾಖೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕು ಸಂಘದ ಅಧ್ಯಕ್ಷ ಎಂ.ಕೆ ಪ್ರಕಾಶ್, ರಾಜ್ಯ ಪರಿಷತ್ ಸದಸ್ಯ ಶಿವಯೋಗ, ಖಜಾಂಚಿ ಟಿ.ಶೇಷಗಿರಿ, ಗೌರವಾಧ್ಯಕ್ಷ ಎಚ್.ಎ ಪದ್ಮನಾಭ, ಉಪಾಧ್ಯಕ್ಷರಾದ ಡಿ.ಎನ್.ನಾಗರಾಜು, ಈ.ಬಿ.ವೆಂಕಟೇಶ್, ಎನ್.ಕೆ.ಪ್ರದೀಪ್, ಪ್ರಧಾನ ಕಾರ್ಯದರ್ಶಿ ಎಸ್.ಸಿ.ಪರಮಶಿವಯ್ಯ, ಪದಾಧಿಕಾರಿಗಳಾದ ಸಿ.ರವಿ, ನಾರಾಯಣ್ ಗೌಡ, ಎಂ.ಮಹದೇವ್, ನಾಗಣ್ಣೇಗೌಡ, ಸಾಕಮ್ಮ, ದಾರುಣಾವತಿ, ರಾಣಿಯಮ್ಮ, ಶೈಲಜಾ, ಕೆ.ಎಂ.ಪ್ರಕಾಶ್, ಎ.ಪಿ.ಕಿರಣ್, ಕೆ.ಎಂ.ಜಗನ್ನಾಥ್, ಶ್ರೀಧರ, ಎಚ್.ಕೆ ಶಿವಮೂರ್ತಿ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ತಿ.ನರಸೀಪುರ ಮೀಸಲು ಕ್ಷೇತ್ರದಲ್ಲಿ ಜಾ.ದಳ ಸಬಲ

ಪಕ್ಷದ ಮುಖಂಡರ ಸಭೆಯಲ್ಲಿ ಎಚ್.ರಮೇಶ್ ಅಭಿಮತ

ತಿ.ನರಸೀಪುರ,ಜ.೧೨– ತಿ.ನರಸೀಪುರ ಮೀಸಲು ವಿಧಾನಸಭಾ ಕ್ಷೇತ್ರವನ್ನು ಜಾ.ದಳ ಪಕ್ಷಕ್ಕೆ ಗೆಲ್ಲುವ ಸಾಮರ್ಥ್ಯ ಇರುವುದರಿಂದ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರಿಗೆ ಕ್ಷೇತ್ರವನ್ನು ಮಾರಿಕೊಳ್ಳುವ ಅಗತ್ಯವಿಲ್ಲ ಎಂದು ಜಾ.ದಳ ಮುಖಂಡ ಎಚ್.ರಮೇಶ್ ಖಡಕ್ಕಾಗಿ ನುಡಿದರು.

ಪಟ್ಟಣದಲ್ಲಿ ನಡೆದ ಜಾ.ದಳ ಮುಖಂಡರ ಸಭೆಯಲ್ಲಿ ಮಾತನಾಡಿ, ೨ ದಿನಗಳ ಹಿಂದೆಯಷ್ಟೆ ಬಿಜೆಪಿ ಸಭೆಯಲ್ಲಿ ತಿ.ನರಸೀಪುರ ಕ್ಷೇತ್ರದಲ್ಲಿ ಜಾ.ದಳದಿಂದ ದುರ್ಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಸಚಿವ ಮಹದೇವಪ್ಪ ಅವರಿಗೆ ಕ್ಷೇತ್ರವನ್ನು ಮಾರಿದ್ದಾರೆ ಎಂಬ ಹಿರಿಯ ಮುಖಂಡರೊಬ್ಬರ ಹೇಳಿಕೆ ಹಾಸ್ಯಾಸ್ಪದ, ಇಂತಹ ಹೇಳಿಕೆಗಳನ್ನು ಬಹಿರಂಗವಾಗಿ ನೀಡುವವರು ಅದಕ್ಕೆ ಖಚಿತ ಸಾಕ್ಷಿಗಳಿದ್ದರೆ ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು.

ಈಗಾಗಲೇ ತಿಳಿದಿರುವಂತೆ ಜಾ.ದಳ ಸ್ವಂತ ಪ್ರಾಬಲ್ಯದೊಂದಿಗೆ ಸಂಘಟನೆಯಲ್ಲಿ ಮುಂಚೂಣಿಯಲ್ಲಿದೆ. ಹಾಗಾಗಿ ಹೆಚ್ಚು ಮುಖಂಡರು ಅಭ್ಯರ್ಥಿಗಳಾಗಲು ಉತ್ಸಾಹ ತೋರುತ್ತಿದ್ದಾರೆ. ಇದರಿಂದಲೇ ಪಕ್ಷದ ಸಂಘಟನೆ ಹೇಗಿದೆ ಎಂಬುದು ತಿಳಿಯುತ್ತದೆ. ಹೀಗಾಗಿ ರಾಜಕೀಯ ಭಾಷಣಕ್ಕಾಗಿ ವಿನಾಕಾರಣ ಇಂತಹ ಅಸಂಬದ್ಧ ಹೇಳಿಕೆಗಳನ್ನು ಬಿಜೆಪಿ ಮುಖಂಡರಾಗಿ ನೀಡಬಾರದು. ರಾಜಕೀಯವಾಗಿ ಹೋರಾಟ ಮಾಡುವುದನ್ನು ಬಿಟ್ಟು, ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಬಾರದು ಎಂದು ಸಲಹೆ ನೀಡಿದರು.

ಪಕ್ಷದ ಸಂಘಟನೆ ಬಲಪಡಿಸಿ, ಎಲ್ಲಾ ವರ್ಗದ ಜನರನ್ನು ತಲುಪಿರುವ ಎಸ್.ಶಂಕರ್ ಅವರ ಪರವಾಗಿ ಸಾಕಷ್ಟು ಒಲವು ವ್ಯಕ್ತವಾಗುತ್ತಿದೆ. ಪಕ್ಷದ ವರಿಷ್ಠರು ಶಂಕರ್ ಅವರನ್ನೇ ಅಧಿಕೃತ ಅಭ್ಯರ್ಥಿಯನ್ನಾಗಿ ಘೋಷಿಸುವ ನಿರೀಕ್ಷೆಯಿದೆ. ಎದುರು ಪಕ್ಷಗಳ ಬಲಿಷ್ಠ ಅಭ್ಯರ್ಥಿಗಳಿಗೂ ಪೈಪೋಟಿ ನೀಡಲು ಶಂಕರ್ ಅವರಿಂದ ಮಾತ್ರ ಸಾಧ್ಯ. ಹೊಸಬರಾದರೆ ಅವರಿಗೆ ಲೆಕ್ಕಕ್ಕಿಲ್ಲ. ಹೀಗಿರುವಾಗ ಪಕ್ಷದ ಕಾರ್ಯಕರ್ತರು ಭಿನ್ನಾಭಿಪ್ರಾಯ ಮರೆತು ನಮ್ಮ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖಂಡರಾದ ಸುನಿಲ್, ರಂಗಸ್ವಾಮಿ, ಸೋಮಣ್ಣ, ಶಂಕರ್, ಸೋಮಣ್ಣ, ಬಸವರಾಜು, ರವಿ, ಸಂದೀಪ್ ಮಾದೇಶ್, ಸಾಧು ಮಲಿಯೂರು ಶಿವಕುಮಾರ್, ಮಹದೇವಸ್ವಾಮಿ, ಪಾಪಣ್ಣ ಇನ್ನಿತರರು ಸಭೆಯಲ್ಲಿ ಹಾಜರಿದ್ದರು.

ತಿ.ನರಸೀಪುರ ಪಟ್ಟಣದಲ್ಲಿ ನಡೆದ ಜಾ.ದಳ ಮುಖಂಡರ ಸಭೆಯಲ್ಲಿ ಪಕ್ಷದ ಮುಖಂಡ ಎಚ್.ರಮೇಶ್ ಮಾತನಾಡಿದರು.

> ಕ್ಷೇತ್ರದಲ್ಲಿ ಮಾದಿಗ ಸಮುದಾಯದ ೨೩ ಸಾವಿರ ಮತದಾರರಿದ್ದು, ಅವರೆಲ್ಲರ ಸಂಪೂರ್ಣ ಬೆಂಬಲ ಶಂಕರ್ ಅವರಿಗೆ ಸಿಗಲಿದೆ. ಅಲ್ಲದೆ ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗದ ಸಮುದಾಯಗಳ ಜನರು ಕೂಡ ಬೆಂಬಲ ನೀಡಲಿದ್ದಾರೆ. ಹೀಗಾಗಿ ಜಾ.ದಳ ಗೆಲುವು ಸಾಧಿಸುವುದು ನಿಶ್ಚಿತ.
>
> **–ರಾಜಣ್ಣ,** ಮುಖಂಡ.

ಮನೆಗಾಗಿ ಡಿಸಿಗೆ ಡೋಂಗ್ರಿ ಗೆರಾಸಿಯ ಮನವಿ

ಹುಣಸೂರು,ಜ.೧೨– ಹುಣಸೂರು ಉಪವಿಭಾಗದ ಸಹಾಯಕ ಆಯುಕ್ತರ ಕಚೇರಿಯಲ್ಲಿ ಹನುಮಂತೋತ್ಸವ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಜಿಲ್ಲಾಧಿಕಾರಿ ಡಿ.ರಂದೀಪ್‌ರವರಿಗೆ ಮಂಗಳೂರು ಮಾಳದ ಡೋಂಗ್ರಿ ಗೆರಾಸಿಯ ಗಿರಿಜನರು ಮನೆ ಮತ್ತು ನಿವೇಶನಗಳಿಗೆ ಒತ್ತಾಯಿಸಿ ಮನವಿಯನ್ನು ಸಲ್ಲಿಸಿದರು.

ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿ, ಗ್ರಾಮದ ಅಸಹಾಯಕ ಡೋಂಗ್ರಿ ಗೆರಾಸಿಯ ಗಿರಿಜನರು ಮನೆ ಇಲ್ಲದೆ ಪರಿತಪಿಸುತ್ತಿದ್ದಾರೆ. ಇಲ್ಲಿ ೩೦ ಕುಟುಂಬಗಳಿದ್ದು, ಕೂಲಿ ಮಾಡಿ ಜೀವನ ನಿರ್ವಹಿಸುತ್ತಿದ್ದಾರೆ. ಇವರಿಗೆ ಸರ್ಕಾರದ ಮೈಕ್ರೋಪ್ಲಾನ್ ಯೋಜನೆಯಡಿ ಮನೆಗಳನ್ನು ನಿರ್ಮಾಣ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಮನವಿಯನ್ನು ಸ್ವೀಕರಿಸಿದ ಜಿಲ್ಲಾಧಿಕಾರಿ, ಈ ಬಗ್ಗೆ ಪರಿಶೀಲಿಸಿ ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಸಹಾಯಕ ಆಯುಕ್ತ ಕೆ.ನಿತೀಶ್, ತಹಸಿಲ್ದಾರ್ ಮೋಹನ್ ಕುಮಾರ್, ಎಸ್‌ಪಿ ರವಿ ಡಿ. ಚನ್ನಣ್ಣನವರ್ ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರಿನ ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ	ದೂರವಾಣಿ ಸಂ.	ಚಿತ್ರ	ಆಟ
ತಿಬ್ಬಾದೇವಿ	೨೫೫೧೯೫೮	ಸ್ಕೆಚ್	೪ ಆಟ
ಉಡ್‌ಲ್ಯಾಂಡ್ಸ್	೨೪೨೨೮೬೧	ಅಂಜನಿಪುತ್ರ	೪ ಆಟ
ಗಾಯತ್ರಿ	೨೪೪೩೫೬೮	ಚಮಕ್	೪ ಆಟ
ಪ್ರಭಾ	೨೪೨೩೫೬೯	ಮರಿ ಟೈಗರ್	೪ ಆಟ
ಪದ್ಮ	೨೫೨೧೯೨೩	ಸ್ಕೆಚ್	೪ ಆಟ
ಸರಸ್ವತಿ	೨೫೪೧೪೫೧	ಅಂಜನಿಪುತ್ರ	೪ ಆಟ
ಲಕ್ಷ್ಮಿ	೨೪೪೩೫೮೪	ಹಂಬಲ್ ಪೊಲಿಟಿಷಿಯನ್ ನೋಗ್ರಾಜ್	೪ ಆಟ
ಒಲಂಪಿಯಾ	೨೪೨೦೬೩೬	ಪುನರಪಿ ಜನನಂ	೪ ಆಟ
ಒಡೋ	೨೪೨೦೮೮೫	ಚಮಕ್	೪ ಆಟ
ಸ್ಕೈಲೈನ್	೨೪೮೧೧೬೦	ಮರಿ ಟೈಗರ್	೪ ಆಟ
ಸ್ಟರ್ಲಿಂಗ್	೨೪೮೧೧೬೦	ಥಾನಾ ಸೇಮ್ದ ಕೂಟ್ಟಮ್	೪ ಆಟ
ಸಂಗಂ	೨೫೨೦೪೯೪	ಬೃಹಸ್ಪತಿ	೪ ಆಟ
ಶ್ರೀನಾಗರಾಜ್	೨೫೨೦೪೯೦	೧೯೨೧	೪ ಆಟ
ಶಾಂತಲ	೨೪೨೬೫೮೪	ಮಫ್ತಿ	೪ ಆಟ
ಬಾಲಾಜಿ	೨೪೯೬೧೯	೧೯೨೧	೪ ಆಟ
ರಾಜ್‌ಕಮಲ್	೨೪೨೩೫೫೪	ಅಜ್ಞಾತವಾಸಿ	೪ ಆಟ
ಮಹದೇಶ್ವರ	೯೬೦೦೮೨೦೧೯೩	ಮರಿ ಟೈಗರ್	೪ ಆಟ
ಶ್ರೀಮಾರುತಿ	೯೮೦೩೫೧೧೧೯	ಮರಿ ಟೈಗರ್	೪ ಆಟ

ಸ್ಕ್ರೀನ್ ೧: ಬೆ.೧೦.೩೦ಕ್ಕೆ– ತಾನಾ ಸೇಂದ ಕೂಟಂ, ಮ.೧.೨೫ಕ್ಕೆ – ಗುಲಾಬಗವಲಿ, ಸಂ.೪.೧೦ಕ್ಕೆ ಜುಮಾಂಜಿ, ೬.೪೫ಕ್ಕೆ ತಾನಾ ಸೇಂದ ಕೂಟಂ, ರಾ.೯.೪೦ಕ್ಕೆ ಸ್ಕೆಚ್ **ಸ್ಕ್ರೀನ್ ೨:** ಬೆ.೯.೫೫ಕ್ಕೆ– ಹಂಬ್ಲೆ ಪೊಲಿಟಿಷಿಯನ್ ನೊಗ್‌ರಾಜ್, ಮ.೧೨.೨೫ಕ್ಕೆ ೧೯೨೧, ಮ ೩.೫೫ಕ್ಕೆ ಹಂಬ್ಲೆ ಪೊಲಿಟಿಷಿಯನ್ ನೊಗ್‌ರಾಜ್, ಸಂ. ೬.೫೫ಕ್ಕೆ ಹಂಬ್ಲೆ ಪೊಲಿಟಿಷಿಯನ್ ನೊಗ್‌ರಾಜ್, ರಾತ್ರಿ ೯.೫೫ಕ್ಕೆ ಹಂಬ್ಲೆ ಪೊಲಿಟಿಷಿಯನ್ ನೊಗ್‌ರಾಜ್ **ಸ್ಕ್ರೀನ್ ೩:** ಬೆ.೧೦.೪೫ಕ್ಕೆ ಚಮಕ್ ಮ.೧.೩೦.ಕ್ಕೆ ಚಮಕ್, ಸಂ.೪.೧೦ಕ್ಕೆ ಚಮಕ್, ಸಂ.೬.೦೦ಕ್ಕೆ ಚಮಕ್, ರಾ.೯.೩೦ಕ್ಕೆ ಹಂಬಲ್ ಪೊಲಿಟಿಷಿಯನ್ ನೋಗ್ರಾಜ್ **ಸ್ಕ್ರೀನ್ ೪:** ಮ.೧.೦೦ಕ್ಕೆ ಅಜ್ಞಾತವಾಸಿ, ಸಂ.೪.೦೦ಕ್ಕೆ ಅಜ್ಞಾತವಾಸಿ, ಸಂ.೬.೦೦ಕ್ಕೆ ಅಜ್ಞಾತವಾಸಿ, ರಾ.೯.೫೫ಕ್ಕೆ ಅಜ್ಞಾತವಾಸಿ

ಸ್ಕ್ರೀನ್ ೧: ಬೆ.೧೦ಕ್ಕೆ– ಇನ್‌ಸಿಡ್ಯೂಸ್ ದ ಲಾಸ್ಟ್ ಕೀ ಮ.೧೨.೧೫ಕ್ಕೆ ಜುಮಾಂಜಿ, ಸಂ.೨.೫೦ಕ್ಕೆ ಇನ್‌ಸಿಡ್ಯೂಸ್ ದ ಲಾಸ್ಟ್ ಕೀ, ೫.೦೫ ಇನ್‌ಸಿಡ್ಯೂಸ್ ದ ಲಾಸ್ಟ್ ಕೀ, ರಾ.೬.೪೦ಕ್ಕೆ ಇನ್‌ಸಿಡ್ಯೂಸ್ ದ ಲಾಸ್ಟ್ ಕೀ, ರಾ.೯.೫೫ಕ್ಕೆ ಜುಮಾಂಜಿ **ಸ್ಕ್ರೀನ್ ೨:** ಬೆ.೧೦.೪೦ಕ್ಕೆ ಪಿಚ್ ಪರ್ಫೆಕ್ಟ್, ಮ.೧೨.೫೦ಕ್ಕೆ ಚಮಕ್, ೩.೫೦ಕ್ಕೆ ಚಮಕ್, ಸಂ.೬.೫೦ಕ್ಕೆ ಇನ್‌ಸಿಡ್ಯೂಸ್ ದ ಲಾಸ್ಟ್ ಕೀ, ರಾ.೯.೪೦ಕ್ಕೆ ಟೈಗರ್ ಜಿಂದಾ ಹೈ, **ಸ್ಕ್ರೀನ್ ೩:** ಬೆ.೧೦.ಕ್ಕೆ ಟೈಗರ್ ಜಿಂದಾ ಹೈ, ಮ.೧.೧೫ಕ್ಕೆ ಬೃಹಸ್ಪತಿ, ಸಂ.೪.೧೫.ಕ್ಕೆ ಟೈಗರ್ ಜಿಂದಾ ಹೈ, ಸಂ೯.೫೦ಕ್ಕೆ ಟೈಗರ್ ಜಿಂದಾ ಹೈ, **ಸ್ಕ್ರೀನ್ ೪:** ಬೆ೯.೫೫ಕ್ಕೆ ಬೃಹಸ್ಪತಿ, ಮ.೧೨.೫೦ಕ್ಕೆ ಅಂಜನಿಪುತ್ರ, ಸ.೩.೫೦ಕ್ಕೆ ಆಡು೨, ಸಂ.೬.೫೫ಕ್ಕೆ ಬೃಹಸ್ಪತಿ, ರಾ.೯.೫೫ಕ್ಕೆ ಅಂಜನಿಪುತ್ರ

ಯುವಕರಿಗೆ ಗ್ರಾಮೀಣ ಕ್ರೀಡೆಗಳ ಮನವರಿಕೆ ಅಗತ್ಯ

ಮಿರ್ಲೆ ಗ್ರಾಮದಲ್ಲಿ ಜೋಡಿ ಎತ್ತಿನ ಗಾಡಿ ಓಟ ಸ್ಪರ್ಧೆ ಉದ್ಘಾಟಿಸಿ ಹೊಸಹಳ್ಳಿ ವೆಂಕಟೇಶ್ ಅಭಿಮತ

ಕೆ.ಆರ್.ನಗರ,ಜ.೧೨– ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಕ್ರೀಡೆಗಳು ಕಣ್ಮರೆಯಾಗುತ್ತಿದ್ದು, ಇಂದಿನ ಯುವ ಪೀಳಿಗೆಗೆ ಅವುಗಳ ಬಗ್ಗೆ ಮನವರಿಕೆ ಮಾಡಿಕೊಡುವಂತಾಗಬೇಕು ಎಂದು ತಾಲ್ಲೂಕು ಬಿಜೆಪಿ ಮುಖಂಡ ಹೊಸಹಳ್ಳಿ ವೆಂಕಟೇಶ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಮಿರ್ಲೆ ಗ್ರಾಮದಲ್ಲಿ ನಡೆದ ಜೋಡಿ ಎತ್ತಿನ ಗಾಡಿಯ ಓಟದ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಆಧುನಿಕ ಯುಗದಲ್ಲಿ ಕೃಷಿ ಮಾಡುವುದಕ್ಕಾಗಿ ರೈತರು ಹೆಚ್ಚಾಗಿ ಯಂತ್ರೋಪಕರಣಗಳನ್ನು ಅವಲಂಬಿಸಿದ್ದಾರೆ. ಹೀಗಾಗಿ ಎತ್ತಿನ ಗಾಡಿಗಳ ಬದಲಿಗೆ ಟ್ರಾಕ್ಟರ್‌ಗಳನ್ನು ಬಳಸುತ್ತಿದ್ದಾರೆ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಪ್ರತೀ ವರ್ಷದ ಸುಗ್ಗಿ ನಂತರ ನಡೆಯುತ್ತಿದ್ದ ಎತ್ತಿನಗಾಡಿ ಓಟ ಸೇರಿದಂತೆ ಇತರೆ ಹಲವು ಗ್ರಾಮೀಣ ಕ್ರೀಡೆಗಳು ಮರೆಯಾಗುತ್ತಿವೆ ಎಂದು ವಿಷಾದಿಸಿದರು.

ಗ್ರಾಮೀಣ ಕ್ರೀಡೆಗಳು ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರದ ಪ್ರತಿರೂಪಗಳು. ವರ್ಷಪೂರ್ತಿ ದುಡಿದ ರೈತರು ತಮ್ಮ ರಾಸುಗಳೊಂದಿಗೆ ಇಂತಹ ಗ್ರಾಮೀಣ ಕ್ರೀಡೆಯಲ್ಲಿ ಭಾಗವಹಿಸಿ ಸಂತಸ ಪಡುತ್ತಿದ್ದುದನ್ನು ಮನದಟ್ಟಾಗುತ್ತದೆ. ಅದೇ ರೀತಿ ತಾಲ್ಲೂಕಿನ ಮಿರ್ಲೆ ಗ್ರಾಮದಲ್ಲಿ ರೈತರು ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಯನ್ನು ಹಮ್ಮಿಕೊಳ್ಳುವ ಮೂಲಕ ಅದನ್ನು ಉಳಿಸುವ ಕಾರ್ಯಕ್ಕೆ ಮುಂದಾಗಿರುವುದು ಸಂತಸ ತಂದಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಯಾವುದೇ ಸ್ಪರ್ಧೆಯಲ್ಲು ಭಾಗವಹಿಸಿದ ಎಲ್ಲರೂ ವಿಜೇತರಾಗಲು ಸಾಧ್ಯವಿಲ್ಲ. ಸೋತವರು ಅದನ್ನು ಮೆಟ್ಟಿಲು ಮಾಡಿಕೊಂಡು ಮುಂದೆ ತಾವು ಗೆಲ್ಲಲ್ಲು ಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ಸ್ಪರ್ಧೆಯಲ್ಲಿ ಚಿಕ್ಕಮಗಳೂರು, ಹಾಸನ, ಮಂಡ್ಯ ಹಾಗೂ ಮೈಸೂರಿನಿಂದ ೪೦ ಜೋಡಿ ಎತ್ತಿನಗಾಡಿ ಸ್ಪರ್ಧಿಗಳು ಭಾಗವಹಿಸಿದ್ದರು. ಸಾಲಿಗ್ರಾಮದ ರಾಜು ಪ್ರಥಮ ಸ್ಥಾನ ಪಡೆದು ೧೮,೦೦೦ ರೂ. ಬಹುಮಾನ ತಮ್ಮದಾಗಿಸಿಕೊಂಡರು. ಹಾಸನ ಜಿಲ್ಲೆ ಮಲ್ಲಿನಾಥಪುರ ಗ್ರಾಮದ ಕಲ್ಕಿ ಎಂಬವರು ದ್ವಿತೀಯ ಸ್ಥಾನ ಪಡೆದು ೧೨,೦೦೦ ರೂ. ಪಡೆದುಕೊಂಡರೆ, ತೃತೀಯ ಬಹುಮಾನ ೮,೦೦೦ ರೂ. ಮಿರ್ಲೆ ಗ್ರಾಮದ ಮಹೇಶ್ ಪಾಲಾಯಿತು.

ನಂತರ ಹೊಸಹಳ್ಳಿ ವೆಂಕಟೇಶ್ ವಿಜೇತರಿಗೆ ಬಹುಮಾನ ವಿತರಿಸಿ, ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲರನ್ನೂ ಗೌರವಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಯೋಗಾನಂದ, ತಾಲ್ಲೂಕು ವೀರಶೈವ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಕುಪ್ಪೆ ಪ್ರಕಾಶ್, ಕಗ್ಗುಂಡಿ ಕುಮಾರ್, ಜಯರಾಮ್, ತಿಲಕ್, ಚಿರಾಗ್ ಸೇರಿದಂತೆ ಹಲವಾರು ಈ ಸಂದರ್ಭದಲ್ಲಿ ಹಾಜರಿದ್ದರು.

> ಈ ಜೋಡಿ ಎತ್ತಿನ ಗಾಡಿ ಓಟದ ಸ್ಪರ್ಧೆಯನ್ನು ಪ್ರತೀ ವರ್ಷ ಆಯೋಜಿಸಬೇಕು. ಇಂಥ ಕ್ರೀಡೆಗಳೂ ನಮ್ಮೆಲ್ಲರವು ಎಂಬುದನ್ನು ಮನಗಂಡು ಪ್ರತಿಯೊಬ್ಬರೂ ಭಾಗವಹಿಸುವಂತಾಗಬೇಕು. ಇಂತಹ ಗ್ರಾಮೀಣ ಕ್ರೀಡೆಗಳಿಗೆ ನಾನು ಸಹ ವೈಯಕ್ತಿಕವಾಗಿ ಸಹಾಯ ಮಾಡಲು ಸದಾ ಸಿದ್ಧನಿರುತ್ತೇನೆ.
>
> **-ಹೊಸಹಳ್ಳಿ ವೆಂಕಟೇಶ್**

ಕೆ.ಆರ್.ನಗರ ತಾಲ್ಲೂಕಿನ ಮಿರ್ಲೆ ಗ್ರಾಮದಲ್ಲಿ ನಡೆದ ಜೋಡಿ ಎತ್ತಿನಗಾಡಿ ಸ್ಪರ್ಧೆಯನ್ನು ಬಿಜೆಪಿ ಮುಖಂಡ ಹೊಸಹಳ್ಳಿ ವೆಂಕಟೇಶ್ ಸ್ವತಃ ಗಾಡಿ ಚಾಲನೆ ಮಾಡುವ ಮೂಲಕ ಉದ್ಘಾಟಿಸಿದರು.